ರಿಟರ್ನಿಂಗ್ ಅಧಿಕಾರಿಗಳ ಕಚೇರಿ
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸಂಘದ ಚುನಾವಣೆಗಳು
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ವಿಜ್ಞಾನ ಭವನ, ನಂ. 24/2,
21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70

ಸಂಖ್ಯೆ:ಕ.ರಾ.ವಿ.ಪ/ಸಾಚು/01/2024-25 ದಿನಾಂಕ:20-05-2025

ವಿಷಯ: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸಂಘದ ತ್ರೈವಾರ್ಷಿಕ ಚುನಾವಣೆಗಳ ಕಂದಾಯ ವಿಭಾಗವಾರು ರಿಟರ್ನಿಂಗ್ ಅಧಿಕಾರಿಗಳ ನೇಮಕಾತಿ.

ಉಲ್ಲೇಖ: ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, 3ನೇ ವಲಯ, ಬೆಂಗಳೂರು ರವರ ಆದೇಶ ಸಂಖ್ಯೆ: ಡಿಆರ್‌ಬಿ-3/ನೋಂ/ಕಲಂ 25/16/2023-24

ಪ್ರಸ್ತಾವನೆ:

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ(1)ರ ಆದೇಶದನ್ವಯ ಶ್ರೀ ಪವನ್ ಕುಮಾರ್ ಎಸ್, ಸಹಕಾರ ಅಭಿವೃದ್ಧಿ ಅಧಿಕಾರಿಯಾದ ನಾನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸಂಘದ ರಾಜ್ಯ ಚುನಾವಣಾಧಿಕಾರಿಯಾಗಿ ನೇಮಕಗೊಂಡಿರುತ್ತೇನೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸಂಘದ ತ್ರೈವಾರ್ಷಿಕ ಅವಧಿಗೆ ಚುನಾವಣೆಗಳನ್ನು ನಡೆಸಲು ಸಂಘದ ರಾಜ್ಯ ಚುನಾವಣಾಧಿಕಾರಿಯಾಗಿ ಚುನಾವಣಾ ಆಧಿಸೂಚನೆಯನ್ನು ಹೊರಡಿಸಿರುತ್ತೇನೆ. ಈ ಸಂಘದ ಕಂದಾಯ ವಿಭಾಗವಾರು ಚುನಾವಣೆ ಜರುಗಿಸಲು ರಿಟರ್ನಿಂಗ್ ಅಧಿಕಾರಿಗಳ ನೇಮಕಾತಿಯ ಅವಶ್ಯವಿರುತ್ತದೆ. ಅದರಂತೆ ಈ ಕೆಳಗಿನ ಆದೇಶ ಹೊರಡಿಸಿದೆ.

-:ಆದೇಶ:-

ಶ್ರೀ ಪವನ್ ಕುಮಾರ್ ಎಸ್, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗು ರಾಜ್ಯ ಚುನಾವಣಾಧಿಕಾರಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಬೆಂಗಳೂರು ಆದ ನಾನು ಉಲ್ಲೇಖ(1)ರ ಆದೇಶದಲ್ಲಿ ದತ್ತವಾದ ಅಧಿಕಾರ ಚಲಾಯಿಸಿ ಸಂಘದ ತ್ರೈವಾರ್ಷಿಕ ಅವಧಿಗೆ ಚುನಾವಣೆಗಳನ್ನು ಜರುಗಿಸಲು ಕಂದಾಯ ವಿಭಾಗವಾರು ರಿಟರ್ನಿಂಗ್ ಅಧಿಕಾರಿಗಳನ್ನುನೇಮಿಸಿದೆ.

1) ಬೆಳಗಾವಿ ವಿಭಾಗ - ಶ್ರೀ ಶಂಕರ್ ಕರಬಸವನವರ್. ಸಹಕಾರ ಅಭಿವೃದ್ಧಿ ಅಧಿಕಾರಿ, ರಾಯಭಾಗ ತಾಲ್ಲೂಕು. ರಾಯಭಾಗ.
2) ಕಲ್ಬುರ್ಗಿ ವಿಭಾಗ - ಶ್ರೀ ಪ್ರಮೋದ್ ಕರ್ಣಂ ಮರಾಟಾಧಿಕಾರಿ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಕಲ್ಬುರ್ಗಿ ಉಪವಿಭಾಗ. ಕಲ್ಬುರ್ಗಿ

Scanned with OKEN Scanner

3) ಮೈಸೂರು ವಿಭಾಗ – ಶ್ರೀ ರವಿ ಎಸ್. ಸಹಕಾರ ಅಭಿವೃದ್ಧಿ ಅಧಿಕಾರಿ, ಕೆ.ಆರ್ ನಗರ ತಾಲ್ಲೂಕು, ಕೆ.ಆರ್ ನಗರ.

ನೇಮಕಗೊಂಡ ಪ್ರಾಂತೀಯ ರಿಟರ್ನಿಂಗ್ ಅಧಿಕಾರಿಗಳು, ಚುನಾವಣೆ ಜರುಗಿಸಲು ಅಗತ್ಯ ಸಿಬ್ಬಂದಿ ನೇಮಕಾತಿ, ಚುನಾವಣೆಗೆ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಹಾಗೂ ಚುನಾವಣಾ ಕೇಂದ್ರಗಳನ್ನು ಗುರುತಿಸಿ ಚುನಾವಣೆ ಜರುಗಿಸಲು ಅಧಿಕಾರ ಹೊಂದಿರುತ್ತಾರೆ. ಹಾಗೂ ಕಾಲಕಾಲಕ್ಕೆ ಈ ಕಛೇರಿಯಿಂದ ಹೊರಡಿಸುವ ಆದೇಶ ಹಾಗೂ ಸೂಚನೆಗಳನ್ನು ಪಾಲಿಸಲು ಸೂಚಿಸಿದೆ.

(ಪವನ್ ಕುಮಾರ್ ಎಸ್)
ರಾಜ್ಯ ಚುನಾವಣಾಧಿಕಾರಿ
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್
ಬೆಂಗಳೂರು–70 ಹಾಗೂ
ಸಹಕಾರ ಅಭಿವೃದ್ಧಿ ಅಧಿಕಾರಿ

ಗೆ,

1) ಶ್ರೀ ಶಂಕರ್ ಕರಬಸವನವರ್. ಸಹಕಾರ ಅಭಿವೃದ್ಧಿ ಅಧಿಕಾರಿ, ರಾಯಭಾಗ ತಾಲ್ಲೂಕು. ರಾಯಭಾಗ.
2) ಶ್ರೀ ಪ್ರಮೋದ್ ಕರ್ಣಂ ಮರಾಟಾಧಿಕಾರಿ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಕಲ್ಬುರ್ಗಿ.
3) ಶ್ರೀ ರವಿ ಎಸ್. ಸಹಕಾರ ಅಭಿವೃದ್ಧಿ ಅಧಿಕಾರಿ, ಕೆ.ಆರ್ ನಗರ ತಾಲ್ಲೂಕು, ಕೆ.ಆರ್ ನಗರ.
4) ಆಡಳಿತಾಧಿಕಾರಿಗಳು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ವಿಜ್ಞಾನ ಭವನ, ನಂ. 24/2, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70.
5) ಕಛೇರಿ ಕಡತಕ್ಕೆ.

ಮಾಹಿತಿಗಾಗಿ:

1) ಸಹಕಾರ ಸಂಘಗಳ ಉಪನಿಬಂಧಕರು, ಮೂರನೇ ವಲಯ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಸಲ್ಲಿಸಿದೆ.

Scanned with OKEN Scanner